## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## **ಅಸಲು ದಾವಾ ಸಂಖ್ಯೆ: 81/2022**

**ಸಾಕ್ಷಿಯನ್ನು ದಿಃ 11.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಬಿ. ಮಹದೇವಸ್ವಾಮಿ | ಡಿ.ಡಬ್ಲ್ಯೂ:2 |
| ತಂದೆಯ ಹೆಸರು | ಬಸಪ್ಪ | |
| ವಯಸ್ಸು | 59 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಅಂಕನಹಳ್ಳಿ | |

**ಮುಖ್ಯ ವಿಚಾರಣೆಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಸಿ.ಆರ್ ವಕೀಲರಿಂದಃ**

ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸದರಿ ಸಮನ್ಸ್ ಈಗ ತಂದಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ. ಸದರಿ ಸಮನ್ಸ್ ಪ್ರತಿಯನ್ನು **ನಿಡಿ. 64** ಎಂದು ಗುರುತಿಸಲಾಯಿತು. ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿದ ಮೇರೆಗೆ ಸಾಕ್ಷಿ ಹೇಳಲು ಬಂದಿರುತ್ತೇನೆ. 1997 ನೇ ಸಾಲಿನಲ್ಲಿ ಸದರಿ ಕ್ರಯಪತ್ರ ಆಗಿತ್ತು. ಸದರಿ ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಲು ಮಾರಾಟ ಮಾಡಿದಂತಹ ಚನ್ನಮ್ಮ, ಕಾಳಯ್ಯ ಅಲಿಯಾಸ್ ಕೆಂಪರಸಯ್ಯ, ಅವರ ಮಕ್ಕಳು ಪುಟ್ಟಸ್ವಾಮಿ, ಲಕ್ಷ್ಮಣ ಮತ್ತು ವೀರಭದ್ರ ರವರು ನನ್ನನ್ನು ಕರೆಸಿಕೊಂಡಿದ್ದರು. ಸದರಿ ಕ್ರಯ ಪತ್ರಕ್ಕೆ ನಾನಲ್ಲದೆ ಇನ್ನೊಬ್ಬರು ಸುರೇಶ್ ಎಂಬುವವರು ಸಹಿ ಮಾಡಿರುತ್ತಾರೆ. ಮಾರಾಟಗಾರರಾಗಿ ಸದರಿ ಪತ್ರಕ್ಕೆ ಚನ್ನಮ್ಮ ಮತ್ತು ಕಾಳಯ್ಯ ರವರು ಸಹಿ ಮಾಡಿರುತ್ತಾರೆ. ಸದರಿ ಸ್ವತ್ತು ಭೂ ಪರಿವರ್ತನೆ ಆಗಿರುವಂತಹ ಸ್ವತ್ತಾಗಿತ್ತು. ಸದರಿ ಪತ್ರವನ್ನು ದಾಖಲೆ ಬರಹಗಾರರಾದ ತಮ್ಮಣ್ಣೇಗೌಡ ಎಂಬುವವರು ಬರೆದಿರುತ್ತಾರೆ.

**ನಿಡಿ.53** ರ ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೆ **ನಿಡಿ. 53(ಸಿ)** ಎಂದು ಗುರುತಿಸಲಾಗಿದೆ. ಕಾಳಯಲ್ಯರವರು ಸಹಿ ನೋಡಿ ಗುರುತಿಸಿದ್ದು, ಸದರಿ ರವರ ಸಹಿಯನ್ನು **ನಿಡಿ. 53(ಎ)** ಎಂದು ಈಗಾಗಲೆ ಗುರುತಿಸಲಾಗಿದೆ. ಇನ್ನೊಬ್ಬ ಸಾಕ್ಷಿದಾರರಾಗಿ ಬಿ. ಸುರೇಶ್ ಎಂಬುವವರು ಸಹಿ ಮಾಡಿದ್ದು, ಅದನ್ನು ನೋಡಿ ಗುರುತಿಸಿದ್ದರಿಂದ, ಸದರಿ ರವರ ಸಹಿಯನ್ನು **ನಿಡಿ. 53(ಇ)** ಎಂದು ಗುರುತಿಸಲಾಯಿತು. ಪತ್ರ ಬರೆದ ತಮ್ಮಣ್ಣೇಗೌಡ ರವರ ಸಹಿ ನೋಡಿ ಗುರುತಿಸಿದ್ದು, ಅವರ ಸಹಿಯನ್ನು ಈಗಾಗಲೆ **ನಿಡಿ. 53(ಡಿ)** ಎಂದು ಗುರುತಿಸಲಾಗಿದೆ. ಚನ್ನಮ್ಮ ರವರು ಮಾರಾಟ ಮಾಡಿದಂತಹ ಸ್ವತ್ತು ಈಗ ನಿವೇಶನಗಳಾಗಿ ಪರಿವರ್ತನೆಗೊಂಡಿವೆ.

**ಪಾಟೀಸವಾಲುಃ-ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ**

ಶ್ರೀ ಎಸ್.ಕೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.